ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

7

ಇಲಾಖೆ / ವಿಷಯ : DEPARTMENT / SUBJECT: ಕೃಷಿ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 16/1/21

# ನೂತನ ಕೃಷಿ ನೀತಿಗಳಿಗೆ ಐಎಂಎಫ್ ಮೆಚ್ಚುಗೆ

ವಾಷಿಂಗ್ಟನ್: ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳನ್ನು ವಿಶ್ವ ಹಣಕಾಸು ನಿಧಿ ಮುಕ್ತಕಂಠದಿಂದ ಶ್ಲಾಘಿಸಿದೆ. 'ಭಾರತದ ಕೃಷಿರಂಗದ ಅಭಿವೃದ್ಧಿಗೆ ಹೊಸ ಕಾಯ್ದೆಗಳು ನಿರ್ಣಾಯಕ ಪಾತ್ರ ವಹಿಸಲಿವೆ' ಎಂದು ತಿಳಿಸಿದೆ. ಐಎಂಎಫ್‌ನ ಸಂಪರ್ಕ ನಿರ್ದೇಶಕ ಗೆರ್ರಿ ರೈಸ್ ಅವರು ಸುದ್ದಿಗೋಷ್ಠಿಯಲ್ಲಿ ನವದೆಹಲಿಯ ರೈತರ ಪ್ರತಿಭಟನೆ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತ, 'ಮಾರಾಟಗಾರರೊಂದಿಗೆ ನೇರ ಒಪ್ಪಂದ ಮಾಡಿಕೊಳ್ಳಲು ರೈತರಿಗೆ ಇದರಿಂದ ಸಾಧ್ಯವಾಗಲಿದೆ. ಮಧ್ಯವರ್ತಿಗಳ ಹಸ್ತಕ್ಷೇಪ ಗಣನೀಯವಾಗಿ ತಗ್ಗಿ, ಮಾರಾಟದ ಆದಾಯದಲ್ಲಿ ಅಧಿಕ ಪಾಲನ್ನು ರೈತರು ಹೊಂದಲಿದ್ದಾರೆ. ಅಲ್ಲದೆ, ಗ್ರಾಮೀಣ ಭಾಗದ ಅಭಿವೃದ್ಧಿಗೂ ಈ ಕಾಯ್ದೆಗಳು ನೆರವಾಗಲಿವೆ' ಎಂದು ಪ್ರತಿಪಾದಿಸಿದ್ದಾರೆ.

**ವಿವಾದಗಳಿಗೂ ಕಿವಿಗೊಡಿ:** 'ಕೃಷಿ ನೀತಿಗಳ ಪರಿಣಾಮದಿಂದ ಖಚಿತವಾಗಿ ಉದ್ಯೋಗ ಮಾರುಕಟ್ಟೆಯೂ ಪ್ರಗತಿ ಕಾಣಲಿದೆ. ಆದರೆ, ಈ ಸುಧಾರಣೆಗಳ ಪ್ರಯೋಜನವು ನೀತಿಗಳ ಅನುಷ್ಠಾನದ ಕಾಲಘಟ್ಟ ಮತ್ತು ಪರಿಣಾಮಕಾರತ್ವ ಅದರ ವಿಮರ್ಶೆಗಳನ್ನೂ ಅವಲಂಬಿಸಿದೆ. ಹೀಗಾಗಿ ಕಾಯ್ದೆ ಕುರಿತು ಎದ್ದಿರುವ ವಿವಾದಗಳ ಬಗ್ಗೆಯೂ ಗಮನ ಕೇಂದ್ರೀಕರಿಸಬೇಕು. ಈ ಹೊಸ ವ್ಯವಸ್ಥೆ ಅನುಷ್ಠಾನ ವೇಳೆ ಅನಗತ್ಯ ತೊಂದರೆ ನೀಡುವವರ ಅಪಾಯವೂ ಎದುರಾಗುವ ಸಾಧ್ಯತೆ ಇದೆ' ಎಂದೂ ಎಚ್ಚರಿಸಿದ್ದಾರೆ.